02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 619/2018**

ಹೆಸರುಃ ಚಂದ್ರಪ್ಪ ಚಾಸಾಃ 11

ತಂದೆಃ ತಿಮ್ಮಪ್ಪ ಪ್ರಾಸಾ:6

ವಯಸ್ಸುಃ 55 ವರ್ಷ

ಉದ್ಯೋಗಃ ಕೂಲಿ

ವಾಸ ಸ್ಥಳಃ ಬೆಂಕಿಕೆಗೆ ಗ್ರಾಮ , ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 12-11-2019 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಈಗ ಸಾಕ್ಷಿಗೆ 04.09.2018 ರ ನಿಪಿ.7 ರ ಅಮಾನತ್ತು ಪಂಚನಾಮೆಯನ್ನು ತೋರಿಸುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 7 ಬಿ ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ನಾನು ಚಾಸಾ.12 ಹಾಗೂ ಪೋಲೀಸರು ಇದ್ದೆವು. ಸದರಿ ಮಹಜರ್ ನ್ನು ಬೆಳಗ್ಗೆ 11.45-12.20 ರ ವರೆಗೆ ಜರುಗಿಸಿರುತ್ತಾರೆ. 04.09.2018 ರಂದು ಐಐಎಫ್ಎಲ್ ಸಂಸ್ಥೆಯವರು ಕಳ್ಳತನವಾದ ಬಂಗಾರದ ಬದಲಿಗೆ ಚೆಕ್ಕನ್ನು ಕೊಡುತ್ತೇವೆ ಎಂದು ತಿಳಿಸಿದ ಮೇರೆಗೆ ಬ್ಯಾಂಕಿನಲ್ಲಿ ಚೆಕ್ಕನ್ನು ಪೋಲೀಸರಿಗೆ ನೀಡಿರುತ್ತಾರೆ.

**(**ಈ ಹಂತದಲ್ಲಿ ಸಾಕ್ಷಿಯು ಮಹಜರ್ ಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು**,** ಮಹಜರ್ ನ್ನು ನೋಡಲಾಗಿ ಸಾಕ್ಷಿಯು ಮಹಜರ್ ಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ**.** ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು**.)**

ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ

ಐಐಎಫ್ಎಲ್ ಸಂಸ್ಥೆಯವರು ತನಿಖಾಧಿಕಾರಿಗಳಿಗೆ 02 ಡಿಡಿ ಗಳನ್ನು ನೀಡಿರುತ್ತಾರೆ ಎಂದರೆ ಸರಿ .

-2-

ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದಃ

ಪಂಚನಾಮೆ ಜರುಗಿಸುವ ಮೊದಲು ನನಗೆ ನೋಟೀಸ್ ನೀಡಿರುವುದಿಲ್ಲ. ಚೆಕ್ ನ ನಂಬರ್ ನೆನಪಿಲ್ಲ. ನನ್ನ ಸಮಕ್ಷಮ ಪೋಲೀಸರು ಏನನ್ನೂ ಬರೆದಿರುವುದಿಲ್ಲ. ಚಾಸಾ.12 ಮತ್ತು 01 ರವರು ನಮ್ಮ ಜನಾಂಗದವರು ಎಂದರೆ ಸರಿ . ಅವರಿಗೆ ಅನುಕೂಲ ಆಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಬರೆಯದೇ ಇದ್ದರೂ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**02** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,

ಚನ್ನಗಿರಿ.

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 619/2018**

ಹೆಸರುಃ ರಾಜಪ್ಪ ಚಾಸಾಃ 12

ತಂದೆಃ ಹನುಮಂತಪ್ಪ ಫ್ರಾಸಾ:5

ವಯಸ್ಸುಃ 53 ವರ್ಷ

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ ಗರಗ ಗ್ರಾಮ , ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 12-11-2019 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಈಗ ಸಾಕ್ಷಿಗೆ 04.09.2018 ರ ಅಮಾನತ್ತು ಪಂಚನಾಮೆಯನ್ನು ತೋರಿಸುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಅಮಾನತ್ತು ಪಂಚನಾಮೆಯನ್ನು ನಿಶಾನೆ ಪಿ 7 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 7 ಎ ಎಂದು ಗುರುತಿಸಲಾಯಿತು. 04.09.2018 ರಂದು ಐಐಎಫ್ಎಲ್ ಸಂಸ್ಥೆಯವರು ಕಳ್ಳತನವಾದ ಬಂಗಾರದ ಬದಲಿಗೆ ಚೆಕ್ಕನ್ನು ಕೊಡುತ್ತೇವೆ ಎಂದು ತಿಳಿಸಿದ ಮೇರೆಗೆ ಬ್ಯಾಂಕಿನಲ್ಲಿ ಚೆಕ್ಕನ್ನು ಪೋಲೀಸರಿಗೆ ನೀಡಿರುತ್ತಾರೆ. ಒಂದು ಚೆಕ್ ರೂ.82,000/- ಮತ್ತೊಂದು 39,000/- ಆಗಿರುತ್ತದೆ. ಆ ಸಮಯದಲ್ಲಿ ನಾನು ಚಾಸಾ.11, ಪೋಲೀಸರು ಇದ್ದೆವು.

**(**ಈ ಹಂತದಲ್ಲಿ ಸಾಕ್ಷಿಯು ಮಹಜರ್ ಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು**,** ಮಹಜರ್ ನ್ನು ನೋಡಲಾಗಿ ಸಾಕ್ಷಿಯು ಮಹಜರ್ ಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ**.** ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು**.)**

ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ

ಐಐಎಫ್ಎಲ್ ಸಂಸ್ಥೆಯವರು ತನಿಖಾಧಿಕಾರಿಗಳಿಗೆ 02 ಡಿಡಿ ಗಳನ್ನು ನೀಡಿರುತ್ತಾರೆ ಎಂದರೆ ಸರಿ .

**-2-**

ಪಾಟೀ ಸವಾಲು **-** ಆರೋಪಿತರ ಪರ ವಕೀಲರಿಂದ

ಚಾಸಾ.01 ರವರು ನನಗೆ ಆತ್ಮೀಯರು ಎಂದರೆ ಅವರು ಪರಿಚಯಸ್ಥರು ಎಂದರೆ ಸರಿ . ಅವರು ನಮ್ಮ ಜನಾಂಗದವರು ಎಂದರೆ ಸರಿ . ಮಹಜರ್ ಜರುಗಿಸಿದ ಸಮಯ 11.45-12.20. ನಿಪಿ.07 ರಲ್ಲಿರುವ ವಿಚಾರ ನನಗೆ ಗೊತ್ತು. ಡಿಡಿ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ಯಾವುದೇ ಡಿಡಿ ಯನ್ನು ಪಡೆಯದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಚೆಕ್ಕನ್ನು ಇಂಗ್ಲೀಷ್ ನಲ್ಲಿ ಬರೆದಿರುತ್ತಾರೆ. ಡಿಡಿ ಬರೆದ ದಿನಾಂಕ ನನಗೆ ನೆನಪಲ್ಲ. ನನ್ನ ಸಮಕ್ಷಮ ಡಿಡಿ ಚೆಕ್ಕನ್ನು ನೀಡದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಸ್ಥಳದ ಚೆಕ್ಕು ಬಂದಿ ಹೇಳಲು ಆಗುವುದಿಲ್ಲ.

ಮರು ವಿಚಾರಣೆ ಇಲ್ಲ**.**

**(** ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು**.)**

**ಓ.ಹೇ.ಕೇ. ಸರಿ ಇದೆ.**

**02** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ**,**

ಚನ್ನಗಿರಿ**.**